**ಓ ಎಸ್ ನಂಃ 116/2016**
**ಡಿ ಡಬ್ಲ್ಯೂ ಃ 1**

**ದಿಃ 10.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ವಿ ಕೆ ವಕೀಲರಿಂದಃ-**

ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವ ದಾಖಲೆಯ ಆಧಾರದ ಮೇರೆಗೆ ತಮ್ಮ ತಂದೆ ಹಾಗೂ ಗಾಳಪ್ಪನವರು ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಕ್ರಯ ಪತ್ರ ಹಾಗೂ ಮರಣ ಶಾಸನಪತ್ರಗಳ ಆಧಾರದ ಮೇರೆಗೆ. ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಿಡಿ 17 ರ ಪ್ರಕಾರ ಮೊದಲ ಬಾರಿಗೆ ತಮ್ಮ ತಾಯಿ ಹಾಗೂ ಗಾಳಪ್ಪನ ಹೆಸರಿಗೆ ದಾವಾ ಸ್ವತ್ತಿನ ಖಾತೆ ವರ್ಗಾವಣೆ ಆಗಿದೆ ಎಂದರೆ ಸರಿ. ಆರ್ ಆರಿ ಟಿ ಸಿ ಆರ್ 331/2006-07 ಪ್ರಕಾರ ಖಾತೆ ವರ್ಗಾವಣೆ ಆಗಿದೆ. ಸದರಿ ಆದೇಶದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಸ್ವತಃ ಮುಂದುವರಿದು ಸದರಿ ಆದೇಶ ಪತ್ರದ ದೃಢೀಕೃತ ನಕಲನ್ನು ಪಡೆಯಲು ಅರ್ಜಿ ಸಲ್ಲಿಸಿರುತ್ತೇನೆ. ನಿಪಿ 12 ದಾಖಲಾತಿಯಲ್ಲಿ ಎಲ್ಲಿಯೂ ಸಹ ಅರಸಮ್ಮ ಮತ್ತು ಗಾಳಪ್ಪನವರ ಹೆಸರಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಖಾತೆ ವರ್ಗಾವಣೆ ಮಾಡುವ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ಸಾಕ್ಷಿ ಸದರಿ ದಾಖಲಾತಿಯಲ್ಲಿ ಬರೆದಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

ನಮ್ಮ ತಂದೆ ಹಾಗೂ ಮುತ್ತಯ್ಯನವರು ಮಾವ ಮತ್ತು ಬಾವಮೈದ ಆಗಬೇಕು. ಮುತ್ತಯ್ಯನವರು ನಮ್ಮ ತಂದೆಯ ಅಕ್ಕನ ಗಂಡ. ಗಾಳಪ್ಪನವರು ಮುತ್ತಯ್ಯನವರ ಹೆಂಡತಿಯ ತಂಗಿ ಮಗ. ಸದರಿ ಸಂಬಂಧಗಳ ಬಗ್ಗೆ ನಿಡಿ 75 ರ ಮರಣ ಶಾಸನ ಪತ್ರ ದಲ್ಲಿ ನಮೂದು ಮಾಡಿದ್ದಾರೆ ಎಂದರೆ ಸರಿ. ನಿಡಿ 75 ರ ಮರಣ ಶಾಸನ ಪತ್ರದಲ್ಲಿ ತಮ್ಮ ತಂದೆ ಕೆಂಪಯ್ಯ ಹಾಗೂ ಗಾಳಪ್ಪನವರು ಮುತ್ತಯ್ಯನವರ ದತ್ತು ಪತ್ರರು ಎಂದು ನಮೂದು ಆಗಿಲ್ಲ ಎಂದರೆ ಸಾಕ್ಷಿಯು ಸಾಕು ಮಕ್ಕಳು ಎಂದು ನಮೂದಾಗಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಡಿ 75 ರ ಮರಣ ಶಾಸನ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಡಿ 75 ರ ದಾಖಲಾತಿಯಲ್ಲಿ ಕೆಂಪಯ್ಯ ಹಾಗೂ ಗಾಳಪ್ಪನವರು

**ಓ ಎಸ್ ನಂಃ 116/2016**

**ಡಿ ಡಬ್ಲ್ಯೂ ಃ 1**

ಸಾಕು ಮಕ್ಕಳು ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಡಿ 75 ರ ರ ಮರಣ ಶಾಸನ ಪತ್ರದಲ್ಲಿ ಕೆಂಪಯ್ಯ ಹಾಗೂ ಗಾಳಪ್ಪನವರ ಹೆಸರಿಗೆ ಯಾವ ಯಾವ ಆಸ್ತಿಗಳು ಬಂದಿವೆ ಎಂದರೆ ಸಾಕ್ಷಿಯು ಈಗ ನನಗೆ ನೆನಪಿಲ್ಲ. ನಿಡಿ 75 ರ ಮರಣ ಶಾಸನ ಪತ್ರದ ಪ್ರಕಾರ ಗಾಳಪ್ಪ ಹಾಗೂ ಕೆಂಪಯ್ಯನವರಿಗೆ ಯಾವ ಯಾವ ಆಸ್ತಿಗಳು ಖಾತೆ ವರ್ಗಾವಣೆ ಆಗಿದೆ ಎಂದು ತೋರಿಸಲು ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಿಡಿ 75 ರ ಮರಣ ಶಾಸನ ಪತ್ರದ ನೈಜತೆಯ ಬಗ್ಗೆ ಪ್ರೊಬೇಟ್ ನ್ನು ಪಡೆದಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಡಿ 75 ರ ಮರಣ ಶಾಸನ ಪತ್ರದ ಪ್ರಕಾರ ತಮ್ಮ ತಂದೆ ಹಾಗೂ ಕೆಂಪಯ್ಯನವರು ಹಾಗೂ ಗಾಳಪ್ಪನವರು ಖಾತೆ ಮಾಡಿಸಿಕೊಂಡಿರುವ ಸ್ವತ್ತುಗಳಲ್ಲಿ ದಾವಾ ಸ್ವತ್ತು ಇಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರಿದು ಆನಂತರ 2006 ಮತ್ತು 2007 ನೇ ಸಾಲಿನಲ್ಲಿ ನಾನು ಖಾತೆಯನ್ನು ಮಾಡಿಸಿಕೊಂಡಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮುತ್ತಯ್ಯನವರು ಮಾಲೀಕರು ಅಲ್ಲದ ಕಾರಣ ಸದರಿ ಸ್ವತ್ತನ್ನು ನಿಡಿ 75 ರ ಮರಣ ಶಾಸನ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಿಡಿ 75 ರ ಮರಣ ಶಾಸನ ಪತ್ರದಲ್ಲಿ ನಮೂದಾಗಿದೆಯಾ ಎಂದರೆ ಸಾಕ್ಷಿ ಕೈ ತಪ್ಪಿನಿಂದ ಬಿಟ್ಟು ಹೋಗಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ.

**ಈ ಹಂತದಲ್ಲಿ ವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**